# ಅವತಾರ ಪುರುಷರ ಲೀಲೆಗಳು

ಸ್ವಾಮಿ ಮಂಗಳಾತ್ಮಾನಂದ

ಪ್ರಪಂಚದ ಇತಿಹಾಸದಲ್ಲಿ ಅವತಾರ ಪುರುಷರು ಆಧ್ಯಾತ್ಮಿಕ ಪ್ರಭೆಯನ್ನು ಬೀರಿ ಮಾನವನ ಮೇಲೆ ಪ್ರಭಾವವನ್ನುಂಟುಮಾಡಿದಂತೆ ಬೇರೆ ಯಾರೂ ಮಾಡಿರುವುದನ್ನು ನಾವು ಕಾಣಲಾರೆವು. ಅವರ ಅಗಾಧ ಶಕ್ತಿ , ದಿವ್ಯತೆ, ಅನಂತ ಗುಣಗಳನ್ನು ಚಿಂತಿಸಿದಷ್ಟೂ ಅವು ಇನ್ನಷ್ಟು ಅಗಮ್ಯವೆನಿಸುತ್ತವೆ. ಇಂತಹ ಮಹಾತ್ಮರ ಲೀಲೆಯನ್ನು ಕುರಿತು ಬರೆದ ಲೇಖಕರು ಇಟಾನಗರ ರಾಮಕೃಷ್ಣ ಮಿಷನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪೂಜ್ಯರ ಹಲವು ಲೇಖನ, ಅನುವಾದಗಳು ಈ ಪತ್ರಿಕೆಯಲ್ಲಿ ಈ ಹಿಂದೆ ಪ್ರಕಟವಾಗಿವೆ.

ಕರ್ಮವನ್ನು ಪ್ರತಿಯೊಂದು ಜೀವಿಯೂ ಮಾಡಬೇಕು. ಅದು ಪ್ರಕೃತಿನಿಯಮ. ಉಸಿರಾಡುವುದು, ನಡೆಯುವುದು, ತಿನ್ನುವುದು, ಇವೆಲ್ಲವೂ ಕರ್ಮಗಳೇ. ಆದರೆ ಕರ್ಮದ ಜೊತೆಗೆ ಯೋಗ ಮಾತ್ರ ಮನುಷ್ಯನಿಗೆ ಸಂಬಂಧಪಟ್ಟದ್ದು. ಕರ್ಮವನ್ನು ಸರಿಯಾದ ನೀತಿ-ನಿಯಮ, ನಿಷ್ಕಾಮ ಭಾವನೆಯಿಂದ ಮಾಡಿದರೆ ಅದು ಕರ್ಮಯೋಗ. ಯದ್ವಾತದ್ವಾ ಮಾಡಿದರೆ ಅದು ಬರಿ ಕರ್ಮ. 'ನಿನ್ನ ಕರ್ಮ' ಎಂದು ಗದರಿಸುವರು; 'ನಿನ್ನ ಕರ್ಮಯೋಗ' ಎಂದು ಯಾರೂ ಗದರಿಸುವುದಿಲ್ಲ. ಶ್ರೀಕೃಷ್ಣ ಗೀತೆಯಲ್ಲಿ ಅದನ್ನೇ ಹೇಳಿದ್ದಾನೆ. 'ಯೋಗಃ ಕರ್ಮಸು ಕೌಶಲಮ್'. ಅಂದರೆ ಕೆಲಸ-ಕಾರ್ಯಗಳನ್ನು ಕೌಶಲದಿಂದ ಮಾಡಬೇಕು. ಸುಮ್ಮನೆ ಮರದ ದಿಮ್ಮಿಯ ಥರ ಕುಳಿತುಕೊಳ್ಳುವವರು ಈ ಜಗತ್ತಿನಲ್ಲಿ ಬಹಳ ಅಪರೂಪ. ಅಂತಹವರು ಇಲ್ಲವೇ ಇಲ್ಲ ಎಂದು ಹೇಳುವ ಹಾಗಿಲ್ಲ. ರಾಜಯೋಗ, ಹಠಯೋಗ, ಅಭ್ಯಾಸ ಮಾಡಿದವರು ಗಂಟೆಗಟ್ಟಲೆ ದಿಮ್ಮಿಯ ಹಾಗೆ ಕುಳಿತುಕೊಳ್ಳುವರು. ಸಂಸಾರದಲ್ಲಿ ಅದಕ್ಕೆ ಅಂಟದೆ ಹೇಗೆ ಕರ್ಮಯೋಗವನ್ನು ಮಾಡಬೇಕೆಂದು ಶ್ರೀರಾಮಕೃಷ್ಣರು ಸೋದಾಹರಣವಾಗಿ ವಿವರಿಸಿದ್ದಾರೆ. ದಾಸಿಯೊಬ್ಬಳು ಶ್ರೀಮಂತನ ಮನೆಯಲ್ಲಿ ಕೆಲಸಕ್ಕಿರುತ್ತಾಳೆ. ಯಜಮಾನನ ಮಕ್ಕಳಿಬ್ಬರನ್ನು ಬಹಳ ಮುದ್ದಾಡುತ್ತಾಳೆ; 'ನನ್ನ ರಾಮ, ನನ್ನ ಭೀಮ' ಎಂದು. ಆದರೆ ಅವಳಿಗೆ ಮನಸ್ಸಿನಲ್ಲಿ ಚೆನ್ನಾಗಿ ಗೊತ್ತಿದೆ, ಇವರು ತನ್ನ ಮಕ್ಕಳಲ್ಲ; ತನ್ನ ಮಕ್ಕಳು ಹಳ್ಳಿಯ ಗುಡಿಸಲಿನಲ್ಲಿವೆ ಎಂದು. ಅವಳ ಮನಸ್ಸು ಅಲ್ಲಿಯೇ ಇರುತ್ತದೆ. ಹೀಗೆ ಸಂಸಾರದಲ್ಲಿ ಭಗವಂತನ ಮೇಲೆ ಮನಸ್ಸನ್ನಿಟ್ಟು ಕೆಲಸ ಮಾಡಬೇಕು. ಇಷ್ಟೆಲ್ಲ ಪೀಠಿಕೆ ಹೇಳಿರುವುದು ಏಕೆಂದರೆ : ಅವತಾರ ಪುರುಷರು ಯಾರೂ ಕರ್ಮ ಮಾಡದೆ ಕುಳಿತಿರಲಿಲ್ಲ ಎಂದು ಹೇಳುವುದಕ್ಕಾಗಿ. ಕರ್ಮಯೋಗ ಮತ್ತು ಗುರುತತ್ತ್ವ ಹೇಗೆ ನಡೆಯುತ್ತದೆ ಎಂದು ನೋಡೋಣ.



ತ್ರೇತಾಯುಗದಲ್ಲಿ ಶ್ರೀರಾಮಚಂದ್ರನು ಹುಟ್ಟಿದನು. ಅವನ ಜೀವನ ಸುಖದ ಸುಪ್ಪತ್ತಿಗೆ ಆಗಿರಲಿಲ್ಲ. ಹುಟ್ಟಿದ್ದು ರಾಜಭವನದಲ್ಲಿ, ದಶರಥರಾಜನ ತಪಸ್ಸಿನಿಂದ ಹಾಗೂ ಆಗಿನ ಕಾಲದ ಪ್ರಸಿದ್ಧ ಯಾಗಾದಿಗಳಿಂದ ಭಗವಂತನು ನರಶರೀರಧಾರಣೆ ಮಾಡಿದ. ಮನುಷ್ಯನಾಗಿ ಹುಟ್ಟಿದ ಮೇಲೆ, ಮನುಷ್ಯರ ಹಾಗೆಯೇ ವ್ಯವಹಾರ ಮಾಡಿದರೆ, ಮಾನವರಲ್ಲಿ ಮಾನವೋತ್ತಮನೂ, ನರೋತ್ತಮನೂ ಆದರೆ ಮಾತ್ರ ಉಳಿದ ಮನುಷ್ಯ ಪ್ರಾಣಿಗಳು ಆತನಿಗೆ ದೇವರ ಸ್ಥಾನವನ್ನು ಕೊಟ್ಟು ಪೂಜಿಸುತ್ತಾರೆ. ಈ ಉತ್ತುಂಗಕ್ಕೆ ಏರಬೇಕಾದರೆ ತ್ಯಾಗ-ತಪಸ್ಸುಗಳಿರಬೇಕು. ಶ್ರೀರಾಮಚಂದ್ರನು ಶೈಶವ ಕಾಲದಲ್ಲಿ ಅರಮನೆಯಲ್ಲಿ ಸುಖ-ಸಂತೋಷದಿಂದ ಇದ್ದಿರಬಹುದು. ವಿದ್ಯಾರ್ಥಿಜೀವನ ಆಗಿನ ಕಾಲದಲ್ಲಿ ಸುಲಭದ್ದಾಗಿರಲಿಲ್ಲ. ಗುರುಕುಲದಲ್ಲಿ, ಪರ್ಣಕುಟೀರದಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಒಂದೇ ವಾಸಸ್ಥಾನ; ಒಂದೇ ತೆರನಾದ ವಿದ್ಯಾಭ್ಯಾಸ. ಶಸ್ತ್ರಾಭ್ಯಾಸ, ಶಾಸ್ತ್ರಾಭ್ಯಾಸಗಳ ಜೊತೆ ಗುರುಶುಶ್ರೂಷೆ, ಗೋಶಾಲೆಯಿಂದ ಪಾಕಶಾಲೆಯತನಕ ಎಲ್ಲ ಕೆಲಸಗಳನ್ನೂ ವಿದ್ಯಾರ್ಥಿಗಳೇ ಮಾಡಬೇಕಿತ್ತು. ಪ್ರಸ್ತುತ ನಮ್ಮ ವಿದ್ಯಾರ್ಥಿಗಳಿಗೆ ಇದು ಕಲ್ಪನೆಗೂ ಬರಲಾರದು. ಈ ಎಲ್ಲ ಕೆಲಸಗಳನ್ನು ಶ್ರೀರಾಮಚಂದ್ರನು ಕಷ್ಟಪಟ್ಟು ಮಾಡಿಯೇ ವಿದ್ಯೆ ಕಲಿತಿರಬಹುದು.

ಶ್ರೀರಾಮಚಂದ್ರನ ಧ್ಯಾನ-ತಪಸ್ಸು ಇವುಗಳ ಬಗ್ಗೆ ನಮಗೆ ನಿಖರವಾದ ಇತಿಹಾಸ ತಿಳಿದಿಲ್ಲ. ಆದರೆ ಆಗಿನ ಕಾಲದಲ್ಲಿ ಕ್ಷತ್ರಿಯರಿಗೂ ತ್ರಿಕಾಲ ಸಂಧ್ಯಾವಂದನೆ ಕಡ್ಡಾಯವಾಗಿತ್ತು. ಆತನ ತ್ಯಾಗದ ಬಗ್ಗೆ ನೋಡೋಣ. ಅಧಿಕಾರತ್ಯಾಗ ಯಾರು ಮಾಡುತ್ತಾರೆ? ಅಧಿಕಾರ ಎಂಬುದು ಮನುಷ್ಯನ ತಲೆಯನ್ನು ತಿರುಗಿಸುತ್ತದೆ. ಅಧಿಕಾರಮೋಹ ಪೀಠಾಧೀಶ, ಮಠಾಧೀಶ, ವೈರಾಗಿ, ವಿರಕ್ತರನ್ನೂ ಬಿಟ್ಟಿಲ್ಲ! ಹಾಗಿರುವಾಗ ಯಾವಾಗಲೋ, ತಂದೆ ಮಾಡಿದ ವಾಗ್ದಾನಕ್ಕೆ ತಲೆಬಾಗಿ ಸಿಂಹಾಸನವನ್ನು ತ್ಯಾಗ ಮಾಡಿದ್ದು, ಶ್ರೀರಾಮ

ಚಂದ್ರನ ಬೃಹತ್ ಸಾಧನೆ. ಇನ್ನು ವನವಾಸ — ಇದು ತ್ಯಾಗದ ಪರಮಾವಧಿಯೇ ಸರಿ. ವನವಾಸದುದ್ದಕ್ಕೂ ಆತ ದುಷ್ಟರೊಡನೆ ಹೋರಾಡಿ ಶಾಂತಿಸ್ಥಾಪನೆ ಮಾಡಿದ. ಋಷಿ-ಮುನಿಗಳ ಸೇವೆ ಮಾಡಿ, ಸತ್ಸಂಗದಿಂದ ತನ್ನ ತಪಶ್ಶಕ್ತಿ ಮತ್ತು ಲೋಕಜ್ಞಾನವನ್ನು ಬೆಳೆಸಿದ. ಸೀತಾಪಹರಣದ ಸಮಯದಲ್ಲಿ ಆತ ಎಷ್ಟು ಕಷ್ಟಪಟ್ಟಿದ್ದನೆಂದು ಲೇಖನಿಯ ಮೂಲಕ ವಿವರಿಸಲು ಸಾಧ್ಯವಿಲ್ಲ. ರಾವಣ ಸಂಹಾರವಾದ ಮೇಲೆ ಸಮಾಜದ ಸ್ವಾಸ್ಥ್ಯಕ್ಕಾಗಿ, ಲೋಕದ ಅಂಜಿಕೆಗಾಗಿ ಸೀತಾಮಾತೆಯನ್ನು ಪರಿತ್ಯಾಗ ಮಾಡಬೇಕಾಯಿತು. ಆದರೆ ಇದರಿಂದ ಶ್ರೀರಾಮಚಂದ್ರನ ದೇವತ್ವ ಇನ್ನೂ ಹೆಚ್ಚು ಪ್ರಕಾಶಕ್ಕೆ ಬಂತು. ಇವತ್ತಿಗೂ ಆತನನ್ನು ಜನ ಕೊಂಡಾಡುತ್ತಿದ್ದಾರೆ, ಪೂಜಿಸುತ್ತಿದ್ದಾರೆ.

ಶ್ರೀರಾಮಚಂದ್ರನು ಪ್ರಶಾಂತಚಿತ್ತನಾಗಿ ಕರ್ಮಯೋಗವನ್ನು ಮಾಡಿದ್ದನೆಂದು ನಮಗೆ ಗೊತ್ತಾಗುತ್ತದೆ. ಯುದ್ಧವಿರಬಹುದು, ಶರಸೇತು ಇರಬಹುದು; ಕರ್ಮಯೋಗವನ್ನು ಹೇಗೆ ಮಾಡಬೇಕೆಂದು ಅವತಾರ ಪುರುಷನು ನಮಗೆ ತೋರಿಸಿಕೊಟ್ಟಿದ್ದಾನೆ. ಹಾಗಾಗಿ ಶ್ರೀರಾಮಚಂದ್ರನು ಗುರುಸ್ಥಾನದಲ್ಲಿ ನಿಲ್ಲುತ್ತಾನೆ.

ಶ್ರೀಕೃಷ್ಣನ ಬಗ್ಗೆ ಸಂಕ್ಷಿಪ್ತವಾಗಿ ನೋಡೋಣ. ಕೃಷ್ಣನ ಬಗ್ಗೆ ಸಹಸ್ರಾರು ವರ್ಷಗಳಿಂದ ಸಹಸ್ರಾರು ಗ್ರಂಥಗಳು ಬಂದಿವೆ; ಇನ್ನೂ ಬರುತ್ತಿವೆ. ಅವನ ಜೀವನವನ್ನು ಅವಲೋಕಿಸಿದಾಗ, ಲೌಕಿಕರ ದೃಷ್ಟಿಯಲ್ಲಿ ಆತ ಸುಖದಿಂದ ಇದ್ದ ಎಂದು ಹೇಳುವುದು ಕಷ್ಟ. ಅವನು ಬಾಲ್ಯದಿಂದಲೇ ಎದುರಿಸಿದ ಅವಘಡಗಳು ಅಸಂಖ್ಯ. ಆದರೂ ಆತ ನಿತ್ಯವೂ ಪ್ರಶಾಂತಚಿತ್ತನಾಗಿದ್ದ. ಆಗೆಲ್ಲ ಆತನ ದೇವತ್ವವು ಪ್ರಕಟವಾಗುತ್ತಿತ್ತು. ಶ್ರೀಕೃಷ್ಣನು ಎಲ್ಲಿಯೂ ಅಪಕೀರ್ತಿಗೊಳಪಟ್ಟಿಲ್ಲ; ಅದಕ್ಕಾಗಿ ಅವನ ಕೀರ್ತಿ ಈಗಲೂ ಅಜರಾಮರವಾಗಿದೆ. ಅರ್ಜುನನಿಗೆ ಶ್ರೀಕೃಷ್ಣನು ಹೇಳುತ್ತಾನೆ : ಅಪಕೀರ್ತಿಗಿಂತ ಸಾಯುವುದೇ ಉತ್ತಮ. ಮಹಾಭಾರತದ ಯುದ್ಧವೆಂದರೆ ಹಿಂದೆ ನಡೆದಿಲ್ಲ, ಮುಂದೆ ನಡೆಯುವುದೂ ಇಲ್ಲ. ಕೋಟಿ ಕೋಟಿ ಸೈನಿಕರು, ಅತಿರಥ ಮಹಾರಥರು ಇವರ ಮಧ್ಯೆ ಕೃಷ್ಣಪರಮಾತ್ಮನು ಅವಿಚಲಿತನಾಗಿ ಅರ್ಜುನನಿಗೆ ಧರ್ಮೋಪದೇಶ ಮಾಡಿದ್ದ! ಇದಕ್ಕಿಂತ ಮೇಲ್ಮಟ್ಟದ ಗುರು ನಮಗೆ ಬೇರೆಲ್ಲಿಯೂ ಸಿಗಲಾರರು. ಶ್ರೀಕೃಷ್ಣನು ಒಬ್ಬ ಪೂರ್ಣಾವತಾರಿ; ದೇಹಧಾರಣೆ ಮಾಡಿದ ಮೇಲೆ ಆತ ಸಾಮಾನ್ಯ ಜನರ ಹಾಗೆ ಕಲಿಯಲು ಏನೂ ಉಳಿದಿರಲಿಲ್ಲ. ಅಲ್ಪ ಕಾಲದಲ್ಲಿ ಎಲ್ಲ ವಿದ್ಯೆಗಳನ್ನು ಆತ ಕರಗತ ಮಾಡಿಕೊಂಡಿದ್ದನೆಂದು ಗ್ರಂಥಗಳಿಂದ ನಮಗೆ ಗೊತ್ತಾಗುತ್ತದೆ. ಅವತಾರ ಪುರುಷರು ಬರುವುದು ನಮಗೆ ಕಲಿಸಲು; ಗುರುತತ್ತ್ವ ಬೋಧಿಸಲು. ಇವರು ರಾಗ-ದ್ವೇಷಗಳಿಂದ ಬಿಡುಗಡೆ ಹೊಂದಿದವರು. ಇವರು ಆಡಿದ್ದು, ಮಾಡಿದ್ದು ಜನಸಾಮಾನ್ಯರಿಗೆ ಪ್ರಮುಖ ಪಾಠಗಳಾಗುತ್ತವೆ. 'ಈ ಹಿಂದೆ ಇದ್ದ ಆಚಾರ, ವಿಚಾರ, ವಿದ್ಯೆಗಳನ್ನು ಪುನಃ ಪ್ರತಿಷ್ಠಾಪಿಸಲು ನಾವು ಬರುವುದು' ಎಂದು ಶ್ರೀಕೃಷ್ಣನೇ ಹೇಳಿದ್ದಾನೆ.

ಆಸಕ್ತಿರಹಿತ ಕೆಲಸ ಮಾಡಬೇಕೆಂದು ಶ್ರೀಕೃಷ್ಣನು ಹೇಳಿದ್ದಾನೆ. ಆಸಕ್ತಿರಹಿತವೆಂದರೆ ಅಸಡ್ಡೆಯಲ್ಲ. ನಿಷ್ಠೆಯಿಂದ ಮಾಡಬೇಕು; ಅದಕ್ಕೆ ತಕ್ಕುದಾದ ಪ್ರತಿಫಲ ಸಿಕ್ಕೇ ಸಿಗುತ್ತದೆ. ಭಗವಾನ್ ಶ್ರೀರಾಮಕೃಷ್ಣರಿಗೆ ಹೃದಯರಾಮ ಹೇಳುತ್ತಾನೆ, ''ದೇವಸ್ಥಾನದ ಯಜಮಾನರು ಹೇಳಿದ್ದಾರೆ, ನಾವು ದೇವಸ್ಥಾನವನ್ನು ಬಿಟ್ಟು ಹೋಗಬೇಕಂತೆ!'' ಪರಮಹಂಸರ ಭುಜದ ಮೇಲಿದ್ದುದು ಒಂದು ಅಂಗವಸ್ತ್ರ ಅಷ್ಟೆ. ತನ್ನ ತಪಸ್ಯೆ ಮತ್ತು ಉಳಿದ ಜೀವಿತಾವಧಿಯನ್ನು ಅಲ್ಲೇ ಕಳೆದಿದ್ದ ಅವರಿಗೆ ಅಲ್ಲಿಂದ ಹೊರಡಲು ಯಾವ ಮೋಹವೂ ತೊಡಕಾಗಿರಲಿಲ್ಲ! 'ಸರಿ ಹೊರಡೋಣ' ಎಂದು ಹೊರಗೆ ಬಂದೇಬಿಟ್ಟರು! ಏಕೆ ಹೋಗಬೇಕೆಂದು ಸಹ ಕೇಳಲಿಲ್ಲ. ಇದು ಅನಾಸಕ್ತಿ. ದೇವಸ್ಥಾನದ ಯಜಮಾನರು (ತ್ರೈಲೋಕನಾಥರು) ಬಂದು, ''ಬಾಬಾ, ತಾವು ಹೋಗುವುದು ಬೇಡ, ಇಲ್ಲಿಯೇ ಇರಿ'' ಎಂದಾಗಲೂ ಅವರು ಅದೇ ಭಾವದಲ್ಲಿ ಕೂಡಲೇ ಹಿಂದಿರುಗಿದರು. ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳಿದ್ದನಾದರೂ, ನಾವು ಹುಲುಮಾನವರು ಅಜ್ಞಾನದಲ್ಲಿ ಬಿದ್ದು ಎಲ್ಲವನ್ನೂ ಮರೆತುಬಿಡುತ್ತೇವೆ. ಇದಕ್ಕಾಗಿ ನಿರಂತರ ಅಭ್ಯಾಸ ಮುಖ್ಯ. ಸತತವಾಗಿ ಅಭ್ಯಾಸ ಮಾಡದೆ ಬರೀ ಪುಸ್ತಕ ಓದಿದರೆ — ಅದು ಪುಸ್ತಕದ ಬದನೆಕಾಯಿ ಆಗುತ್ತದೆ. ಶ್ರೀಕೃಷ್ಣ ಪರಮಾತ್ಮನು ತನ್ನ ಬಗ್ಗೆ ಎಲ್ಲಿಯೂ ಹೇಳಿಕೊಂಡಿಲ್ಲ, ಪ್ರಚಾರವನ್ನೂ ಮಾಡಿಲ್ಲ. ಆತ ನರದೇಹಧಾರಣೆ ಮಾಡಿ ಐದಾರು ಸಹಸ್ರ ವರ್ಷಗಳೇ ಸಂದಿವೆ. ಈಗಲೂ ಆತನ ಹೆಸರು ಪ್ರಚಾರಗೊಳ್ಳುತ್ತಿದೆ. ಪಾಶ್ಚಾತ್ಯ ಧರ್ಮಗಳಾದ ಕ್ರೈಸ್ತ, ಮುಸ್ಲಿಂ ವಿದ್ವಾಂಸರು ಶ್ರೀಕೃಷ್ಣನ ಉದಾಹರಣೆಯನ್ನು ಕೊಡುತ್ತಿದ್ದಾರೆ. ಇದರಿಂದ ಗೊತ್ತಾಗುತ್ತದೆ, ಅವತಾರ ಪುರುಷರು ಏನು ಸಾಧಿಸಿ, ತೋರಿಸಿಕೊಟ್ಟು ಹೋಗಿದ್ದಾರೋ ಅದು ಎಂದೆಂದಿಗೂ ಉಳಿಯುತ್ತದೆ, ಎಂದು. ಅದು ಸತ್ಯಧರ್ಮ. ಶ್ರೀಕೃಷ್ಣನು ಎಂದಿಗೂ ರಾಜ ಸಿಂಹಾಸನದಲ್ಲಿ ಕೂರಲಿಲ್ಲ; ಇತರರನ್ನು ಕೂರಿಸಿದ. ತನಗಾಗಿ ಒಂದು ರಾಜ್ಯವನ್ನೂ ಕಟ್ಟಲಿಲ್ಲ; ಧರ್ಮರಕ್ಷಣೆಗಾಗಿ ಯುದ್ಧ ಮಾಡಿ, ಇತರರಿಗೆ ರಾಜ್ಯಗಳನ್ನು ಗೆಲ್ಲಿಸಿಕೊಟ್ಟ. ನಿಃಸ್ಪೃಹನಾಗಿ ತನ್ನ ಜೀವನವನ್ನು ಲೋಕಾರ್ಪಣೆ ಮಾಡಿದ. ಆತ ಸ್ವತಃ ಕರ್ಮಯೋಗಿ ಆಗಿದ್ದ. ಆಗಿನ ಕಾಲದ ದುಷ್ಟ ರಾಜರಿಗೆ ಶ್ರೀಕೃಷ್ಣನು ಯಮಸದೃಶನಾಗಿದ್ದ. ಎಂತಹ ಅದ್ಭುತವಾದ ನಿಸ್ವಾರ್ಥಸೇವೆ! ಕೃಷ್ಣನು ಭಗವಂತನ ಪೂರ್ಣಾವತಾರಿ ಎಂದೇ ಭೀಷ್ಮಾಚಾರ್ಯರು 'ಅಗ್ರಪೂಜೆ' ಸಲ್ಲಿಸಿದ್ದು. ಕೃಷ್ಣನ ಇನ್ನೊಂದು ವಿಶೇಷತೆಯನ್ನು ನಾವು ಇಲ್ಲಿ ಉಲ್ಲೇಖಿಸಿದರೆ ಅನುಚಿತವಾಗದು. ಅವನು ತಲೆಬೋಳಿಸಿ, ಕಾವಿಬಟ್ಟೆ ತೊಡಲು ಹೇಳಲೇ ಇಲ್ಲ. ಅವನೇ ಸಂಸಾರಿ! ಸಂಸಾರಿಯಾದರೂ, ಪರಮತ್ಯಾಗಿ. ಆ ಪರಮತ್ಯಾಗಿಯನ್ನು 'ಜಗದ್ಗುರು' ಎಂದು ಬಣ್ಣಿಸಿದ್ದಾರೆ ಸಂತರು.

ಈಗ ನಾವು ಶ್ರೀರಾಮಕೃಷ್ಣ ಪರಮಹಂಸರ ಜೀವನದ ಬಗ್ಗೆ ನೋಡೋಣ. ಬಹುಶಃ ಆಧ್ಯಾತ್ಮಿಕ ಮತ್ತು ಧಾರ್ಮಿಕ ಜಗತ್ತಿನಲ್ಲಿ ಗುರು-ಶಿಷ್ಯರೆಂದರೆ, ಶ್ರೀರಾಮಕೃಷ್ಣ - ಸ್ವಾಮಿ ವಿವೇಕಾನಂದರು. ಅವರಿಬ್ಬರಿಗೆ ಅವರೇ ಸಾಟಿ; ಬೇರೆ ಯಾರೂ ಇಲ್ಲ. ಯುಗಾಚಾರ್ಯ, ವೀರವೇದಾಂತಿ, ಮಹಾಜ್ಞಾನಿ ಶಿಷ್ಯನನ್ನು ಪರಮಹಂಸರು ತಯಾರು ಮಾಡಿದರು. ಹಿಂದೆ ಕಾಣದ, ಅದ್ಭುತ ಯುಗಾವತಾರ ಮಹಾಪುರುಷನನ್ನು ವೀರ ವೇದಾಂತಿ ಸ್ವಾಮಿ ವಿವೇಕಾನಂದರು ಜಗತ್ತಿಗೆ ಪ್ರಚುರ ಪಡಿಸಿದರು.

ಜಗತ್ತಿನ ಇನ್ನಾವ ಅವತಾರ ಪುರುಷರ ಇತಿಹಾಸವೂ ಇಷ್ಟೊಂದು ವಿಶದವಾಗಿ ಸಿಕ್ಕಿಲ್ಲ. ಪರಮಹಂಸರ ಶಿಷ್ಯರು ತಮ್ಮ ಗುರುಗಳ

ದಿನಚರಿ ಸಹಿತ ಎಲ್ಲ ವಿವರಗಳನ್ನೂ ದಾಖಲಿಸಿದ್ದಾರೆ. ಇವರ ಜೀವನದಲ್ಲಿ ಅಂತೆ-ಕಂತೆ-ಬೊಂತೆಗಳಿಗೆ ಅವಕಾಶವಿಲ್ಲ. ಉಳಿದ ಪುರಾಣಪುರುಷರ ವಿಷಯದಲ್ಲಿ ಇದನ್ನು ನಿಖರವಾಗಿ ಹೇಳುವ ಹಾಗಿಲ್ಲ. ಶ್ರೀರಾಮಕೃಷ್ಣರು ತಮ್ಮ ಅವತಾರ ಲೀಲಾನಾಟಕದ ಕೊನೆಯ ಅಂಕದಲ್ಲಿದ್ದಾರೆ. ಗಂಟಲಿನಲ್ಲಿ ಹುಣ್ಣಾಗಿ, ತಿಂದ ಆಹಾರ, ಹುಣ್ಣಿನ ಮೂಲಕ ಹೊರಗೆ ಬರುತ್ತಿದೆ! ಆಗಲೂ ಯುವಕ ನರೇಂದ್ರ ನಾಥನಿಗೆ ಸಂಶಯ; ಇವರು ಭಗವಂತನೇ ಹೌದೆ? ಸರ್ವಾಂತ ರ್ಯಾಮಿ ಶ್ರೀರಾಮಕೃಷ್ಣರು ಥಟ್ಟನೆ ಹೇಳಿದರು, ''ಯಾರು ಶ್ರೀರಾಮಚಂದ್ರನಾಗಿದ್ದನೋ, ಯಾರು ಶ್ರೀಕೃಷ್ಣನಾಗಿದ್ದನೋ ಅವನೇ ಈಗ ಈ ನರಶರೀರದಲ್ಲಿ ರಾಮಕೃಷ್ಣರೂಪಿಯಾಗಿದ್ದಾನೆ.'' ನರೇಂದ್ರನ ಸಂಶಯ ಉರಿದ ಕರ್ಪೂರದಂತಾಯಿತು.

ಮೊದಲ ಎರಡು ಮಹಾಪುರುಷರ ಬಗೆಗೆ ಹೇಳಿದ ಹಾಗೆ, ಶ್ರೀರಾಮಕೃಷ್ಣರ ಜೀವನವು ಕೂಡ ಸುಖಸುಪ್ಪತ್ತಿಗೆಯನ್ನು ಕಂಡ ದ್ದಲ್ಲ. ಕ್ಷುದೀರಾಮ ಚಟ್ಟೋಪಧ್ಯಾಯರು ದೈವಭಕ್ತರಾಗಿದ್ದರೂ ಕೂಡ, ಬಡತನವು ಅವರ ಮನೆಯಲ್ಲಿ ತಾಂಡವವಾಡುತ್ತಿತ್ತು. ಬಡವನ ಮನೆಯನ್ನೇ ಭಗವಂತ ಸ್ವೀಕರಿಸಿದ್ದ!

ಉಳಿದ ಅವತಾರ ಪುರುಷರು ರಾಜಮನೆತನದಲ್ಲಿ ಹುಟ್ಟಿ ದವರು. ಕ್ಷುದೀರಾಮನಿಗೆ ಭಗವಂತ ಹೇಳಿದ್ದ, ''ನೀನು ಏನು ಕೊಡುತ್ತೀಯೋ ನಾನು ಅದರಲ್ಲಿಯೇ ತೃಪ್ತಿಪಡುತ್ತೇನೆ.'' ಅದನ್ನೇ ತಾನೆ ಶ್ರೀಕೃಷ್ಣನು ಹೇಳಿದ್ದ - **'ಪತ್ರಂ ಪುಷ್ಪಂ ಫಲಂ ತೋಯಂ...'** ಪೂರ್ಣಾವತಾರಿಗಳ ಶಿಕ್ಷಣವು ಚೆನ್ನಾಗಿ ನಡೆದಿತ್ತು. ಹಿಂದಿನ ಯುಗ ಗಳಲ್ಲಿ ಶಸ್ತ್ರವಿದ್ಯೆ-ಅಸ್ತ್ರವಿದ್ಯೆ ಬಹಳ ಮುಖ್ಯವಾಗಿತ್ತು. ಶ್ರೀರಾಮ ಕೃಷ್ಣರ ಯುಗದಲ್ಲಿ ಅವರಿಗೆ ಶಸ್ತ್ರವಿದ್ಯೆಯ ಆವಶ್ಯಕತೆ ಇರಲಿಲ್ಲ. ಶಾಸ್ತ್ರವಿದ್ಯೆಯು ಅವರಿಗೆ ಹುಟ್ಟುವಾಗಲೇ ಕರಗತವಾಗಿತ್ತು. ಅವ ತಾರ ಪುರುಷರಲ್ಲಿ ಪಾಠಶಾಲೆಗೆ ಹೋಗಿ ಅತಿಕಡಿಮೆ ವಿದ್ಯೆ ಕಲಿತ ವರು ಶ್ರೀರಾಮಕೃಷ್ಣ ಪರಮಹಂಸರೊಬ್ಬರೆ. ಅವರು ಪ್ರತಿ ಯೊಂದು ವಿಚಾರದಲ್ಲಿಯೂ ಇತಿಹಾಸ ನಿರ್ಮಿಸಿ ಹೋಗಿದ್ದಾರೆ. ಅವರು ಗೃಹಸ್ಥರಾಗಿದ್ದರು ನಿಜ; ಆದರೆ ಸತಿಪತಿಗಳು ದೈಹಿಕ ಪ್ರಲೋಭನೆಯನ್ನು ಮೀರಿ ಇರಬಹುದೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅಣಿಮಾದಿ ಅಷ್ಟಸಿದ್ಧಿಗಳು ಗುರುಮಹಾರಾಜ ರಿಗೂ ಲಭಿಸಿತ್ತು. ಶ್ರೀಕೃಷ್ಣನಿಗೂ ಕರತಲಾಮಲಕವಾಗಿತ್ತು. ಈ ಸಿದ್ಧಿಗಳಿಂದ ಕವಡೆ ಕಾಸಿನ ಉಪಯೋಗವಿಲ್ಲವೆಂದು ಉಭಯರೂ ಹೇಳಿದ್ದಾರೆ.

ಅಧ್ಯಾತ್ಮಿಕ ಜೀವನದಲ್ಲಿ 'ಭಾವಮುಖ' ಎಂಬ ಶಬ್ದವನ್ನು ನಾವು ಮೊದಲ ಸಲ ನೋಡುವುದೇ ಶ್ರೀರಾಮಕೃಷ್ಣರ ಜೀವನ ದಲ್ಲಿ. ಭಾವಮುಖವನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ : ಲೌಕಿಕ ಮತ್ತು ಪಾರಲೌಕಿಕ ಜಗತ್ತುಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಏಕಕಾಲದಲ್ಲಿ ನೋಡುವ, ಅನುಭವಿಸುವ ವಿಶೇಷ ಶಕ್ತಿ. ಈ ಶಕ್ತಿ ಯನ್ನು ಭವತಾರಿಣಿಯೇ ಶ್ರೀಗುರುಮಹಾರಾಜರಿಗೆ ಅನುಗ್ರಹಿ ಸಿದ್ದಳು. ಸಂತರು ರಾಗ-ದ್ವೇಷ ವಿಮುಕ್ತರಲ್ಲ; ಆದರೆ ಅವತಾರ ಪುರುಷರು ಇವನ್ನು ಮೀರಿದವರು. ಅವರು ಸರ್ವಾಂತರ್ಯಾಮಿ ಗಳು. ಎರಡು ಕಡೆ ದುರ್ಗಾಪೂಜೆ ನಡೆಯುವಾಗ ಏಕಕಾಲಕ್ಕೆ ಅವರು ಉಪಸ್ಥಿತರಿದ್ದನ್ನು ಅವರ ಭಕ್ತರು ನೋಡುತ್ತಾರೆ. ಇದರ ವಿವರಣೆ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ಗ್ರಂಥದಲ್ಲಿ ಸಿಗುತ್ತದೆ. ಶ್ರೀರಾಮಕೃಷ್ಣರ ಸಮಾಧಿಯ ಅವಸ್ಥೆಯಲ್ಲಿ ಅವರ ಮೈಮೇಲೆ ಬಟ್ಟೆ ನಿಲ್ಲದೆ, ಕೆಳಗೆ ಬಿದ್ದು ಹುಟ್ಟಾ ಮಗುವಿನ ಹಾಗೆ ಇರುತ್ತಿದ್ದರು! ಇಂತಹ ಸಂದರ್ಭಗಳಲ್ಲಿ ಮಹಿಳೆಯರು ಅವರ ಎದುರು ನಾಚು ತ್ತಿರಲಿಲ್ಲ! ಕಾರಣ ಮಹಿಳೆಯರು ಅವರನ್ನು ಒಬ್ಬ ಮಹಿಳೆಯರ ತರಹ ನೋಡುತ್ತಿದ್ದರು. ಅಥವಾ ಮಹಿಳೆಯರು ಗಂಡು ಹೆಣ್ಣಿನ ಭಾವನೆಯನ್ನೇ ಮೀರಿ ಹೋಗುತ್ತಿದ್ದರು! ಈ ಭಾವನೆಯನ್ನು ಸಾಮಾನ್ಯ ಜನರಲ್ಲಿ ತರಬೇಕಾದರೆ ಅದು ಅವತಾರ ಪುರುಷರಿಂದ ಮಾತ್ರ ಸಾಧ್ಯ. ಸಾಮಾನ್ಯ ಸಂತರಿಗೆ ಈ ಅವಸ್ಥೆಗೇರಿಸಲು ಸಾಧ್ಯ ವಿಲ್ಲ. 'ಎಷ್ಟು ಮತಗಳೋ ಅಷ್ಟು ಪಥಗಳು ಮತ್ತು ಅವುಗಳೆಲ್ಲವೂ ಸತ್ಯ' ಎಂಬುದನ್ನು ಜಗತ್ತಿಗೆ ಮೊದಲು ಸಾರಿದ್ದು ಈ ಅವತಾರ ಪುರುಷರು. ಅವರು ತ್ರಿಕಾಲಗಳಿಗೆ ಅತೀತರಾಗುತ್ತಿದ್ದರು! ಭೂತ-ಭವಿಷ್ಯತ್-ವರ್ತಮಾನಗಳೆಲ್ಲ ಅವರೊಳಗೆ ಒಂದಾಗಿ ಹೋಗು ತ್ತಿದ್ದವು! ಹಾಗಾಗಿ ಅವರು ಬೃಂದಾವನದಲ್ಲಿ ಶ್ರೀಕೃಷ್ಣನ ಲೀಲೆ ನೋಡಿದ ಹಾಗೆ, ಕಾಶಿಯಲ್ಲಿ ಶಿವನ ಲೀಲೆಯನ್ನೂ ನೋಡು ತ್ತಿದ್ದರು. ಸಾಧನೆಯ ಕಾಲದಲ್ಲಿ ಸೀತಾಮಾತೆಯನ್ನು ಯಥಾರೀತಿ ರಾಮಾಯಣದ ಕಾಲದಲ್ಲಿ ನಡೆದ ಹಾಗೆ ನೋಡುತ್ತಿದ್ದರು. ಶ್ರೀರಾಮಕೃಷ್ಣರು ಮಾಯಾಧೀಶರು; ನಾವೋ ಮಾಯಾಧೀನರು. ಸರ್ವಾಂತರ್ಯಾಮಿಯನ್ನು ನಾವು ಕಲ್ಲಿನ ಮೂರ್ತಿ, ಚಿತ್ರ ಪಟ ಗಳಲ್ಲಿ ಬಂಧಿಸಲು ನೋಡುತ್ತಿದ್ದೇವೆ. ಎಲ್ಲರೊಳಗೆ ಅಡಗಿರುವವ ನನ್ನು ನಮ್ಮ ಕಾಲಮಿತಿಯೊಳಗೆ ಬಂಧಿಸಲು ಸಾಧ್ಯವೆ? ರಾಮ ಕೃಷ್ಣರು ಒಂದು ಸಲ ಶ್ರೀಮಾತೆಯವರಿಗೆ ಹೇಳುತ್ತಾರೆ : ''ನಾನು ಹೋಗುತ್ತಿದ್ದೇನೆ, ನನ್ನ ಕೆಲಸವನ್ನು ನೀನು ಮುಂದುವರಿಸು'' ತನ್ನ ಅವತಾರ ಕೆಲಸಕ್ಕಾಗಿ, ತನ್ನ ಧರ್ಮಸಂಗಿನಿ, ವಿವೇಕಾನಂದ ಮತ್ತಿ ತರರನ್ನು ತನ್ನ ಜೊತೆಗೆಯೆ ಅವರು ಕರೆದುಕೊಂಡು ಬಂದಿದ್ದರು! ಶ್ರೀರಾಮಕೃಷ್ಣರ ದಿವ್ಯಶಕ್ತಿ ಇರದಿದ್ದರೆ ಸಾಮಾನ್ಯ ಗೃಹಿಣಿಯಿಂದ ರಾಮಕೃಷ್ಣ ಮಹಾಸಂಘವನ್ನು ನಡೆಸಲು ಸಾಧ್ಯವಿತ್ತೆ?

ಈಗ ಅವರ ಕರ್ಮಯೋಗದ ವರಸೆಯನ್ನು ನೋಡೋಣ. ಕತ್ತಿ, ಗುದ್ದಲಿಗಳನ್ನು ಹಿಡಿದುಕೊಂಡು ದೇಹ ದಂಡಿಸಿ ಕೆಲಸ ಮಾಡಿ ದರೆ ಅದನ್ನು ಕರ್ಮಯೋಗ ಎನ್ನಲು ಆಗುವುದಿಲ್ಲ; ಅದು ಹೊಟ್ಟೆ ಪಾಡಿಗಾಗಿ ಮಾಡುವ ವಿದ್ಯೆ. ಶ್ರೀರಾಮಕೃಷ್ಣರು ಬಾಲ್ಯಕಾಲ ದಲ್ಲಿಯೇ ದೇವರ ಮೂರ್ತಿಗಳನ್ನು ತಯಾರಿಸುತ್ತಿದ್ದರು. ಮುರಿದ ದೇವರ ಮೂರ್ತಿಗಳನ್ನು ದುರಸ್ತಿಪಡಿಸುವ ನಿಪುಣತೆ ಹೊಂದಿದ್ದರು. ಮಮತೆಯ ಮಾತೆಯೊಂದಿಗೆ ಅಡಿಗೆಯನ್ನೂ ಮಾಡುತ್ತಿದ್ದರು. ತನ್ನ ಸ್ನೇಹಿತರಿಗೆ ಅಭಿನಯ ಹೇಳಿಕೊಡುತ್ತಿದ್ದರು. ಸ್ವತಃ ನಾಟಕ ಗಳಲ್ಲಿ ಅಭಿನಯಿಸುತ್ತಿದ್ದರು. ಊರಿನವರಿಗೆ ರಾಮಾಯಣ ಮಹಾ ಭಾರತಗಳ ಬಗ್ಗೆ ಹರಿಕಥೆ ಮಾಡುತ್ತಿದ್ದರು. ಸಾಧನಾ ಕಾಲದಲ್ಲಿ ಕಠಿಣವಾದ ತಪಶ್ಚರ್ಯೆಗಳನ್ನು ಮಾಡಿ ಎಲ್ಲ ಸಿದ್ಧಿಗಳನ್ನು ಕರಗತ ಮಾಡಿಕೊಂಡಿದ್ದರು. ಮರ್ತ್ಯಲೀಲೆಯನ್ನು ಕೊನೆಗಾಣಿಸುವ ಮುನ್ನ ಅದ್ಭುತವಾಗಿ ಧರ್ಮಪ್ರಚಾರವನ್ನು ಮಾಡುತ್ತಿದ್ದರು. ಐದಾರು ಘಂಟೆ ನಿರಂತರವಾಗಿ ಉಪದೇಶ ಕೊಡುತ್ತಿದ್ದರು. ತನ್ಮಧ್ಯೆ ಗೃಹಿಣೀ ಧರ್ಮ ಏನೆಂದು ಶ್ರೀಮಾತೆಯವರಿಗೆ ಬೋಧಿಸುತ್ತಿದ್ದರು. ಭಕ್ತರ

ಜೊತೆ ತಾಳ, ಮೃದಂಗ, ಖಂಜನಿ(ಕರತಾಳ)ಗಳಿಂದ ಭಗವನಾಮ ಸಂಕೀರ್ತನೆ ಮಾಡುವಾಗ ಸಿಂಹಪರಾಕ್ರಮದಿಂದ ಅದ್ಭುತವಾಗಿ ನೃತ್ಯ ಮಾಡುತಿದ್ದರು. ಭಾವಾವೇಶದಲ್ಲಿ ಕೂಡ ಅವರು ತಾಳ ತಪ್ಪು ತ್ತಿರಲಿಲ್ಲ; ಪರಿಪೂರ್ಣರಲ್ಲವೆ? ಭಕ್ತರ ಮನೆಗಳಿಗೆ ನಿರಂತರ ಭೇಟಿ ಕೊಟ್ಟು ಭಗವನ್ನಾಮ ಸಂಕೀರ್ತನೆ, ಉಪದೇಶ ಕೊಡುವುದನ್ನು ಮಾಡುತ್ತಿದ್ದರು. ಆಗಿನ ನಮ್ಮ ದೇಶದಲ್ಲಿ ಬ್ರಿಟಿಷರ ರಾಜಧಾನಿ ಕಲ್ಕತ್ತವೇ ದೇಶದ ಕೇಂದ್ರವಾಗಿತ್ತು. ಶ್ರೀರಾಮಕೃಷ್ಣರು ತನ್ನ ಲೀಲೆ ಯನ್ನು ಪ್ರಚಾರ ಮಾಡಲು ಕಲ್ಕತ್ತವನ್ನೇ ಆಯ್ಕೆ ಮಾಡಿದ್ದರು! ರಾಜಧಾನಿಯಲ್ಲಿ ಏನು ಮಾಡಿದರೂ ಪಾಶ್ಚಾತ್ಯ ದೇಶಗಳಿಗೂ ಅದು ಹಬ್ಬುತ್ತಿತ್ತು. ಬ್ರಿಟಿಷರ 'ಅಮೂಲ್ಯ' ಕೊಡುಗೆಗಳಲ್ಲಿ ಒಂದಾದ ಮದ್ಯಪಾನದ ದುಶ್ಚಟ ಕಲ್ಕತ್ತದಲ್ಲಿ ಅತಿಯಾಗಿತ್ತು. ಹಾಗೆಯೇ ಆಂಗ್ಲ ವಿದ್ಯಾಭ್ಯಾಸವು ಹೆಚ್ಚು ಪ್ರಚಲಿತದಲ್ಲಿದ್ದುದ್ದು ಕಲ್ಕತ್ತದಲ್ಲಿ ಮಾತ್ರ. ಪರಮಹಂಸರಿಗೆ ಸ್ವತಃ ಆಂಗ್ಲ ವಿದ್ಯಾಭ್ಯಾಸದ ಗಂಧಗಾಳಿಯೂ ಇರದಿದ್ದರೂ ಕೂಡ, ಅವರ ಉಪದೇಶಗಳು ಆಗಿನ ಆಂಗ್ಲ ಪತ್ರಿಕೆಗಳಲ್ಲಿಯೇ ಹೆಚ್ಚು ಪ್ರಚಾರಗೊಂಡಿದ್ದವು. ಆಂಗ್ಲ ವಿದ್ಯಾಭ್ಯಾಸವನ್ನು ಪಡೆದು ಸಂಶಯಗಳ ಆಗರವಾಗಿದ್ದ ಯುವಕರು ಶ್ರೀರಾಮಕೃಷ್ಣರ ಹತ್ತಿರ ಬರುತ್ತಿದ್ದರು; ಅಥವಾ ರಾಮಕೃಷ್ಣರೇ ಅವರನ್ನು ಆಕರ್ಷಿಸುತ್ತಿದ್ದರು. ಕಲ್ಕತ್ತದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಮಹಾಕುಡುಕ ಗಿರೀಶ್ಚಂದ್ರ ಘೋಷರನ್ನು ಪರಿವರ್ತಿಸಿ, ತನ್ನ ಪ್ರಚಾರ ಸಾಧನವನ್ನಾಗಿಸಿದ್ದು ಪರಮಹಂಸರ ಪವಾಡಗಳಲ್ಲಿ ಒಂದು. ಶ್ರೀರಾಮಕೃಷ್ಣರು ತಮ್ಮ ಅಪೂರ್ವ ಪ್ರಜ್ಞೆಯಿಂದ, ತಮ್ಮ ಧರ್ಮಪ್ರಚಾರ ಮಾಡಲು, ಆಂಗ್ಲ ವಿದ್ಯಾಭ್ಯಾಸವನ್ನು ಪಡೆದಿದ್ದ ಯುವಕ ಶಿಷ್ಯರ ಒಂದು ಪಡೆಯನ್ನೇ ತಯಾರು ಮಾಡಿದ್ದರು. ಈ ಶಿಷ್ಯರಲ್ಲಿ ಕೆಲವರು ಮುಂದೆ ಅವರ ಸಂನ್ಯಾಸಿ ಶಿಷ್ಯರಾಗಿ ಖ್ಯಾತಿ ಪಡೆದರು. ಇಲ್ಲಿ ಶ್ರೀಕೃಷ್ಣನ ಒಂದು ಮಾತನ್ನು ಹೇಳಿದರೆ ಅದು ಸಮಯೋಚಿತವಾಗದಿರದು. **'ಯೋಗಃ ಕರ್ಮಸು ಕೌಶಲಮ್'** ಎಂಬಂತೆ ಸಮತ್ವ ಬುದ್ಧಿಯಿಂದ ಮಾಡುವ ಕರ್ಮವನ್ನು ಕೌಶಲ ಪೂರ್ಣವಾಗಿ ಮಾಡಲು, ಗುರುಮಹಾರಾಜರೇ ತನ್ನ ಶಿಷ್ಯರಿಗೆ ತರಬೇತಿ ಕೊಟ್ಟಿದ್ದರು. ಶ್ರೀಮಾತೆಯವರ ಶಿಷ್ಯರೊಬ್ಬರು ಬರೆಯು ತ್ತಾರೆ: 'ಗುರುಮಹಾರಾಜರ ಶಿಷ್ಯರಲ್ಲಿ ಯಾವಾಗಲೂ ಒಂದು ಪ್ರಶಾಂತತೆಯನ್ನು ನೋಡಬಹುದಿತ್ತು, Be normal!' ಪರ ಧರ್ಮಾವಲಂಬಿ ಹೇಗೆ ಅವರ ಹತ್ತಿರ ಬರುತ್ತಿದ್ದರೋ, ಹಾಗೆಯೇ ನಾಸ್ತಿಕರೂ ಅವರ ಹತ್ತಿರ ಬಂದು ಪರಿವರ್ತನೆಗೊಳ್ಳುತ್ತಿದ್ದರು.

ಶ್ರೀಕೃಷ್ಣ ಒಬ್ಬ ಸುಧಾರಣವಾದಿಯಾಗಿದ್ದ. ಆದರೆ ಶ್ರೀರಾಮ ಕೃಷ್ಣರು ಇನ್ನೂ ಒಂದು ಹೆಜ್ಜೆ ಮುಂದುವರಿದವರಾಗಿದ್ದರು! ವೇಶ್ಯೆ ಯರಿಗೆ, ಕುಡುಕರಿಗೆ, ಡಕಾಯಿತರಿಗೆ ಕೂಡ ಉಪದೇಶ (ಕೆಲವು ಸಲ ವೀಕ್ಷಣೆ ಮಾತ್ರ) ಕೊಟ್ಟು ಮನಃಪರಿವರ್ತನೆ ಮಾಡಿ ಅವರನ್ನು ಉದ್ಧಾರ ಮಾಡಿದ್ದರು. ಇದು ಒಂದು ಹೊಸ ಆಂದೋಲನಕ್ಕೆ ನಾಂದಿಯಾಯಿತು. ಆದರೆ ಈ ಆಂದೋಲನವನ್ನು ಚೈತನ್ಯ ಮಹಾ ಪ್ರಭುಗಳೇ ಪ್ರಾರಂಭಿಸಿದ್ದರು. ಅದು ಕ್ಷೀಣಿಸುವ ಹೊತ್ತಿಗೆ ಶ್ರೀರಾಮ ಕೃಷ್ಣರು ಬಂದು ಅದನ್ನು ಮುಂದುವರಿಸಿದರು. ಎಷ್ಟೋ ಜನ ಗುರುಗಳಾಗಿ ಬಂದು, ಕೊನೆಗೆ ಅವರ ಶಿಷ್ಯರಾಗಿ ಪರಿವರ್ತನೆ ಹೊಂದಿ ದ್ದನ್ನು ನಾವು ಅವರ ಜೀವನ ಚರಿತ್ರೆಯಲ್ಲಿ ನೋಡಬಹುದು!

ಶ್ರೀ ಗುರುಮಹಾರಾಜರು ಒಂದು ಸಲ ಅವರ ಶಿಷ್ಯರೊಬ್ಬರಿಗೆ, 'ಇಂತಹ ಭಕ್ತರೊಬ್ಬರ ಮನೆಯಲ್ಲಿ ಒಂದು ಭೇಟಿಕೊಡು' ಎಂದು ಹೇಳಿದಾಗ, 'ಕಲ್ಕತ್ತಾದ ಆ ಮನೆ ನನಗೆ ತೀರ ಅಪರಿಚಿತ. ಅವರು ನನಗೆ ಮನೆಯೊಳಗೆ ಬಿಡಲಾರರು' ಎಂದು ಸಂಶಯಪಟ್ಟರು. ಶ್ರೀರಾಮಕೃಷ್ಣರು ತನ್ನೆದೆಯನ್ನು ತೋರಿಸಿ ಅವರಿಗೆ ಹೇಳುತ್ತಾರೆ, ''ನನ್ನ ಹೆಸರನ್ನು ಹೇಳು, ನಿನ್ನನ್ನು ಖಂಡಿತ ಒಳಗೆ ಬಿಡುತ್ತಾರೆ.'' ತನ್ನ ಹೃದಯದೊಳಗೆ ಆ ಸರ್ವವ್ಯಾಪಿ ಭಗವಂತ ಇದ್ದಾನೆ, ನನ್ನ ಹೆಸರನ್ನು (ರಾಮಕೃಷ್ಣನಾಮ) ಹೇಳು ಎಂಬುದೇ ಇಲ್ಲಿ ಇಂಗಿತ. ಶ್ರೀಕೃಷ್ಣನು ಭಕ್ತರಿಗೆ ಇದೇ ಆಶ್ವಾಸನೆಯನ್ನು ಕೊಡುತ್ತಾನೆ. **''ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು...''** *(ಗೀತೆ, ೯.೩೪)*. ನನ್ನ ಹೆಸರನ್ನು ಹೇಳು ಎನ್ನುವ ಶ್ರೀರಾಮಕೃಷ್ಣರ ಮಾತಿಗೆ ಸಂದರ್ಭೋಚಿತವಾಗಿ ಇಲ್ಲೊಂದು ಉದಾಹರಣೆ ಕೊಟ್ಟರೆ ಅನುಚಿತವಾಗದು. ಕೆಲವು ದಿನಗಳ ಮೊದಲು ನಾನು ಅಸ್ಸಾಂ ರಾಜ್ಯದಿಂದ ಅರುಣಾಚಲದ ಇಟಾನಗರಕ್ಕೆ ಬರುತ್ತಿದ್ದೆ. ಜೊತೆಗೆ ಒಂದೆರಡು ಭಕ್ತರು. ಗಾಡಿ ಕೂಡ ಆ ಭಕ್ತರದ್ದೇ ಆಗಿತ್ತು. ನನ್ನನ್ನು ಇಟಾನಗರಕ್ಕೆ ಬಿಟ್ಟು ಆ ಭಕ್ತರು ಪುನಃ ಅಸ್ಸಾಂ ರಾಜ್ಯದತ್ತ ಮುಂದು ವರಿಯಬೇಕಿತ್ತು. ಅರುಣಾಚಲ ಪ್ರದೇಶ ಸರಕಾರದ ನಿಯಮದಂತೆ ಆ ರಾಜ್ಯವನ್ನು ಪ್ರವೇಶಿಸುವವರಿಗೆ ರಹದಾರಿ (I.L.P) ಅತಿ ಮುಖ್ಯ. ನನ್ನ ಅನುಮತಿ ಪತ್ರ ಉಳಿದವರಿಗೆ ಆಗದು. ಅವರು ಸ್ವಲ್ಪ ಸಮಯಕ್ಕೆ (ಒಂದು ಘಂಟೆ) ರಾಜ್ಯದೊಳಗೆ ಪ್ರವೇಶಿಸಬೇಕು. ನನಗೂ ಕೂಡ ಇದು ಮರೆತು ಹೋಗಿತ್ತು. ಗಡಿಯಲ್ಲಿ ಒಳಗೆ ಬಿಡದಿದ್ದರೆ ಬಂದ ದಾರಿಗೆ ಸುಂಕವಿಲ್ಲದೆ ಇಪ್ಪತ್ತು ಕಿಲೋಮೀಟರ್ ಹಿಂದೆ ಹೋಗಬೇಕಿತ್ತು! ಗುರು ಮಹಾರಾಜರ ಹೆಸರನ್ನು ಹೇಳುತ್ತ 'ಬಂದದ್ದೆಲ್ಲ ಬರಲಿ ಗೋವಿಂದನ ದಯವೊಂದಿರಲಿ' ಎಂದು ಚೆಕ್ ಪೋಸ್ಟಿಗೆ ಬಂದುಬಿಟ್ಟೆವು. ಮೂರು ಜನ ಪೋಲೀಸರು ಎದುರು ಬಂದುನಿಂತರು! 'ರಾಮಕೃಷ್ಣ ಮಿಷನ್ ಆಸ್ಪತ್ರೆ' ಎಂದು ಧೈರ್ಯ ವಾಗಿ ಹೇಳಿದೆ. ಅವರು, ''ಜಾಯಿಯೆ, ಜಾಯಿಯೆ'' ಎಂದು ಬಿಟ್ಟುಬಿಟ್ಟರು. 'ಬದುಕಿದೆಯಾ ಬಡಜೀವ' ಎಂದು 'ಜೈ ಠಾಕೂರ್' ಎಂದೆ. ಇಲ್ಲಿ ಶ್ರೀರಾಮ ಕೃಷ್ಣರ ಹೆಸರೇ ನಮ್ಮನ್ನು ಪಾರುಮಾಡಿದ್ದು. ಇಲ್ಲದಿದ್ದರೆ ಇಪ್ಪತ್ತು ಕಿ.ಮೀ ಹಿಂದಕ್ಕೆ ಹೋಗಿ ಆ ಭಕ್ತರನ್ನು ಅವರ ಪಾಡಿಗೆ ಬಿಟ್ಟು ನಾನು ಬೇರೆ ಗಾಡಿಗಾಗಿ ಪರದಾಡಬೇಕಿತ್ತು! ಘಟನೆ ಚಿಕ್ಕದಿರಬಹುದು, ನಗಣ್ಯವೂ ಹೌದು. ಆದರೆ ಶ್ರೀರಾಮಕೃಷ್ಣರ ನಾಮದ ಪ್ರಭಾವ ಹೇಗಿದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಸ್ವಾಮಿ ವಿವೇಕಾನಂದರಿಗೆ ದೇಶವಿದೇಶಗಳಲ್ಲಿ ಬೇಕಾದಷ್ಟು ವೈರಿಗಳಿದ್ದರು. ಅವರ ಹೆಸರಿಗೆ ಮಸಿ ಬಳಿಯಲು, ಚರಿತ್ರೆ ನಷ್ಟ ಮಾಡಲು, ವಿಷವನ್ನು ಉಣಿಸುವವರೆಗೂ ವಿದ್ವೇಷಿಗಳು ಹೋಗಿ ದ್ದರು. ಆದರೆ ರಾಮಕೃಷ್ಣರ ನಾಮ ಪ್ರಸಾರವಾಗಬೇಕಿತ್ತಲ್ಲವೆ? ಹಾಗಾಗಿ ತನ್ನ ಪರಮಶಿಷ್ಯನ ಬೆಂಗಾವಲಾಗಿ, ಎಲ್ಲ ಕಡೆಯೂ ಶ್ರೀರಾಮಕೃಷ್ಣರು ರಕ್ಷಣೆ ಕೊಡುತ್ತಿದ್ದರು. ಅವರ ಅವತಾರ ಲೀಲೆ ಯನ್ನು ಲೇಖನಿಯಲ್ಲಿ ಬಂಧಿಸುವ ನಾವು ಎಂತಹ ಅಲ್ಪಜ್ಞರು! ಅದು ಸಾಧ್ಯವೂ ಇಲ್ಲ. ಅವರ ಕೃಪೆಯಿಂದ ಮಾತ್ರ ಎಲ್ಲವೂ ಸಾಧ್ಯ. ಗುರು ಮಹಾರಾಜರಿಗೆ ಜಯವಾಗಲಿ!